**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 41/2020**

**ಚಾ.ಸಾ. :-1**
**ಪ್ರಾ.ಸಾ. :-1**

| | |
|---|---|
| ಹೆಸರು | : ಗೌಸ್ ಖಾನ್ |
| ತಂದೆಯ ಹೆಸರು | : ಲೇಟ್ ದಸ್ತಗಿರ್ ಖಾನ್ |
| ವಯಸ್ಸು | : 67 ವರ್ಷ |
| ಉದ್ಯೋಗ | : ನಿವೃತ್ತ ನೌಕರರು |
| ವಾಸಸ್ಥಳ | : ಸುಭಾಷ್ ನಗರ, ಮೈಸೂರು |

---

**ಪ್ರಮಾಣೀಕರಿಸಲಾದ ದಿನಾಂಕಃ- 15.09.2025**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ನಾಸಿರ್ ಖಾನ್ ರವರು ನನ್ನ ತಮ್ಮ. ಅವರಿಗೆ ದಿನಾಂಕಃ 17.06.2019 ರಂದು ಬೆಳಗ್ಗಿನ ಜಾವ 2.00 ರ ಸಮಯದಲ್ಲಿ ಶ್ರೀರಂಗಪಟ್ಟಣದ ಗಂಜಾಂ ಸರ್ಕಲ್ ಬಳಿ ಅಪಘಾತವಾಗಿರುತ್ತದೆ. ಆ ಸಮಯದಲ್ಲಿ ಅವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದು, ಅವರಿಗೆ ಕಾರು ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ.

ನನಗೆ ಅಪಘಾತದ ಬಗ್ಗೆ ನಮ್ಮ ಊರಿನವರಾದ ಚಾ.ಸಾ-2 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ನಾನು ಸ್ಥಳಕ್ಕೆ ಹೋಗಿ ನೋಡಿದ್ದು, ಅವರು ಮೃತಪಟ್ಟಿದ್ದರು.

ಆ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಆ ದಿನ ನಾನು ಮತ್ತು ನನ್ನ ಕುಟುಂಬದವರು ನನ್ನ ಅಣ್ಣನ ಮಗನ ಮದುವೆಗೆ ಚನ್ನರಾಯಪಟ್ಟಣಕ್ಕೆ ಕಾರಿನಲ್ಲಿ ಹೋಗಿದ್ದೆವು. ನಾವು ಒಟ್ಟು 4 ಜನ ಅಣ್ಣ-ತಮ್ಮಂದಿರು, 4 ಕುಟುಂಬದವರೂ ಮದುವೆಗೆ ಹೋಗಿದ್ದೆವು, ಅವರು ಬೇರೆ ಬೇರೆ ಕಾರಿನಲ್ಲಿ ಬಂದಿದ್ದರು. ನಾನು ಅಪಘಾತದ ಸ್ಥಳಕ್ಕೆ ಬಂದಾಗ ಅಲ್ಲಿ ಸುಮಾರು 10-20 ಜನ ಸೇರಿದ್ದರು. ಆಟೋ ನಿಲ್ದಾಣದಲ್ಲಿದ್ದವರು ನಾನು ಸ್ಥಳಕ್ಕೆ ಬಂದ ನಂತರ ಮೃತರನ್ನು ಶವಾಗಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನನಗೆ ಕನ್ನಡ ಓದಲು ಬರುತ್ತದೆ. ನಾನು ಪೊಲೀಸರಿಗೆ ಹೇಳಿಕೆ ದೂರು ಕೊಟ್ಟಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಬೆಳಗ್ಗಿನ ಜಾವ ಸುಮಾರು 3.30 ಕ್ಕೆ ಹೋಗಿರುತ್ತೇನೆ. ಚಾ.ಸಾ-3 ರವರಿಗೆ ನಾನು ಮದುವೆಗೆ ಯಾವ ವಾಹನದಲ್ಲಿ ಹೋಗಿರುತ್ತೇನೆಂದು ತಿಳಿಸಿಲ್ಲ. ಮೃತರು ನಮ್ಮ ಧರ್ಮದ ಬಗ್ಗೆ ಪ್ರವಚನ ಮಾಡುತ್ತಿದ್ದರು. ಅಪಘಾತಪಡಿಸಿದ ಕಾರಿನ ನಂಬರ್ ಗೊತ್ತಿಲ್ಲ.

**2.** ಮೃತರಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಚಾಲನಾ ಪರವಾನಗಿ ಇರಲಿಲ್ಲ ಹಾಗೂ ಅವರು ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸುಳ್ಳು. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಮೃತರ ಸಂಬಂಧ ವಿಮೆ ಪರಿಹಾರಕ್ಕಾಗಿ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿ. ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಆತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನಿರ್ಲಕ್ಷ್ಯತನದಿಂದ ಅಪಘಾತ ಆಗದಿದ್ದರೂ ಗಾಯಾಳುವಿನ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**